Received on 21/12/2020

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಆಯವ್ಯಯ/ಅ.ಉ.ಸ/07/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:21.12.2020.

## ಸುತ್ತೋಲೆ

ವಿಷಯ: ಅತಿಥಿ ಉಪನ್ಯಾಸಕರಿಗೆ ಗೌರವಧನ ಪಾವತಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶಸಂಖ್ಯೆ:ಇಡಿ:80,ಹೆಚ್‌ಪಿಸಿ2020, ಬೆಂಗಳೂರು ದಿನಾಂಕ:18.05.2020. ಮತ್ತು ತಿದ್ದುಪಡಿ ಆದೇಶ ದಿನಾಂಕ:20.07.2020.
2) ಆದೇಶಸಂಖ್ಯೆ:ಡಿಸಿಇ:ಟಿಆರ್ ಎನ್:ಜಿಇಎನ್:06:2020-ಟಿಡಿಜಿ, ಬೆಂಗಳೂರು ದಿನಾಂಕ:28.10.2020.
3) ಈ ಕಛೇರಿಯ ಸಮಸಂಖ್ಯೆ:ದಿನಾಂಕ:04.12.2020.

********

ಈ ಕಛೇರಿಯ ಸಮಸಂಖ್ಯೆಯ ದಿ:16.12.2020ರ ಆದೇಶದಲ್ಲಿ ಈ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿರುವ ಸಿಬ್ಬಂದಿಗಲ ಗೌರವ ಧನ ಪಾವತಿಗೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಹೊಸದಾಗಿ ಪ್ರಾರಂಬಿಸಿರುವ ಹಾಗೂ ಡಿ.ಡಿ.ಓ ಕೋಡ್ ಹೊಂದಿಲ್ಲದಿರುವ ಕೆಲ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿರುವ ಸಿಬ್ಬಂದಿಗಳಿಗೆ ಗೌರವಧನ ಪಾವತಿಸುವ ಸಂಬಂಧ ಅನುದಾನವನ್ನು ಒಂದೇ ಖಜಾನಾ ವ್ಯಾಪಿಯಡಿ ಬರುವ ಕಾಲೇಜಿನ ಕೆ-2 ಕೋಡ್‌ಗೆ ಅನುದಾನವನ್ನು ಅಪ್‌ಲೋಡ್ ಮಾಡಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ಸ್ಥಳಾಂತರಗೊಂಡಿರುವ ಕಾಲೇಜುಗಳ ವಿವರ | ಅತಿಥಿ ಉಪನ್ಯಾಸಕರ ಗೌರವಧನದ ಮೊತ್ತ. | ಒಂದೇ ಖಜಾನೆ ವ್ಯಾಪ್ತಿಯಡಿಯಲ್ಲಿ ಬರುವ ಕಾಲೇಜಿಗೆ ಅನುದಾನ ಅಪ್ಲೋಡ್ ಮಾಡಿರುವ ವಿವರ. | ಡಿಡಿಒ ಕೋಡ್ |
|---|---|---|---|
| 1 | 2 | 3 | 4 |
| ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ | 215695 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ | 180400 |
| ರೆಸಿಡೆನ್ಸಿಯಲ್ ಸ.ಪ್ರ.ದ ಕಾಲೇಜು ಹರದನಹಳ್ಳಿ, ಹೊಳೆನರಸೀಪುರ | 79066 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಡವಲಹಿಪ್ಪೆ ಹೊಳೆನರಸೀಪುರ | 180730 |
| ರೆಸಿಡೆನ್ಸಿಯಲ್ ಸ.ಪ್ರ.ದ ಕಾಲೇಜು ಮುದ್ನಾಳ್, ಯಾದಗಿರಿ | 117063 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ | 181010 |
| ರೆಸಿಡೆನ್ಸಿಯಲ್ ಸ.ಪ್ರ.ದ ಕಾಲೇಜು ಕವಿತಾಳ | 38579 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾನ್ವಿ | 183430 |
| ಸ.ಪ್ರ.ದ ಕಾಲೇಜು, ಕನ್ಯಾನ, ಬಂಟ್ವಾಳ | 456181 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಟ್ಲ | 183750 |
| ಸ.ಪ್ರ.ದ ಮಹಿಳಾ ಕಾಲೇಜು, ಯಡಹಳ್ಳಿ | 165241 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಲೋಕಾಪುರ | 183870 |
| ರೆಸಿಡೆನ್ಸಿಯಲ್ ಸ.ಪ್ರ.ದ ಕಾಲೇಜು ದೇವಗಿರಿ | 173774 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದೇವಗಿರಿ | 333460 |
| ರೆಸಿಡೆನ್ಸಿಯಲ್ ಸ.ಪ್ರ.ದ ಕಾಲೇಜು, ತಳಬಾಳ | 64845 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಬುರ್ಗಾ | 182350 |

ಮೇಲೆ ತಿಳಿಸಿರುವಂತೆ ಕಾಲಂ (3)ರಲ್ಲಿರುವ ಕಾಲೇಜುಗಳ ಪ್ರಾಂಶುಪಾಲರುಗಳು ಕಾಲಂ(1)ರಲ್ಲಿರುವ ಕಾಲೇಜುಗಳ ಅತಿಥಿ ಉಪನ್ಯಾಸಕರುಗಳ ಗೌರವಧನ ಪಾವತಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ/ದಾಖಲೆಗಳನ್ನು ಪಡೆದು ಖಜಾನೆ-2ರಡಿಯಲ್ಲಿ ಬಿಲ್ಲುಗಳನ್ನು ಸಿದ್ಧಪಡಿಸಿ ಖಜಾನೆಗೆ ಸಲ್ಲಿಸುವ ಮುಖಾಂತರ ಗೌರವಧನ ಪಾವತಿಗೆ ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ.

ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಯನ್ನು:

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ ಮತ್ತು ಕಲಬುರ್ಗಿ.
2. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು – ಮಾಹಿತಿ ಹಾಗೂ ಸಂಬಂಧಪಟ್ಟ ಖಜಾನೆ/ಉಪಖಜಾನೆಗೆ ನಿರ್ದೇಶನ ನೀಡಲು ಕೋರಿದೆ.

Received on 21/12/2020
[illegible]

# ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಆಯವ್ಯಯ/ಅ.ಉ.ಸ/07/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:21.12.2020

## ಸುತ್ತೋಲೆ

ವಿಷಯ: ಅತಿಥಿ ಉಪನ್ಯಾಸಕರಿಗೆ ಗೌರವಧನ ಪಾವತಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶಸಂಖ್ಯೆ:ಇಡಿ:80,ಹೆಚ್ ಪಿಸಿ2020, ಬೆಂಗಳೂರು ದಿನಾಂಕ:18.05.2020, ಮತ್ತು ತಿದ್ದುಪಡಿ ಆದೇಶ ದಿನಾಂಕ:20.07.2020.

2) ಆದೇಶಸಂಖ್ಯೆ:ಡಿಸಿಇ:ಟಿಆರ್ ಎನ್:ಜಿಇಎನ್:06:2020-ಟಿಡಿಜಿ, ಬೆಂಗಳೂರು ದಿನಾಂಕ:28.10.2020.ಮತ್ತು 07.12.2020.

3) ಈ ಕಛೇರಿಯ ಸಮಸಂಖ್ಯೆ:ದಿನಾಂಕ:16.12.2020.

++++++++

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಲ್ಲೇಖ-1, 2, ರ ಸರ್ಕಾರದ ಆದೇಶದ ಮೇರೆಗೆ ಕೆಳಕಂಡ ಕಾಲೇಜುಗಳನ್ನು ಹುದ್ದೆ ಮತ್ತು ಸಿಬ್ಬಂದಿಗಳ ಸಮೇತ ಇತರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ವರ್ಗಾಯಿಸಲಾಗಿರುತ್ತದೆ. ಅದರಂತೆ ವರ್ಗಾಯಿಸಿರುವ ಕಾಲೇಜುಗಳು ಈಗಾಗಲೇ ಸ್ಥಳಾಂತರಿಸಿರುವ ಸ್ಥಳಗಳಲ್ಲಿ ಪ್ರಾರಂಭಿಸಲಾಗಿರುತ್ತದೆ. ಕೋರೋನ ಸಾಂಕ್ರಾಮಿಕ ಖಾಯಿಲೆ ಹಿನ್ನೆಲೆಯಲ್ಲಿ ಲಾಕ್‌ಡೌನ್ ಪ್ರಯುಕ್ತ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2019-20ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿದ ಅತಿಥಿ ಉಪನ್ಯಾಸಕರಿಗೆ ಉಲ್ಲೇಖ-3ರ ಸರ್ಕಾರದ ಆದೇಶದ ಪ್ರಕಾರ ಸದರಿ ಅವಧಿಗೆ ಗೌರವಧನ ಪಾವತಿಸಲು ಅನುಮತಿ ನೀಡಿದೆ.

ಆದ್ದರಿಂದ ಉಲ್ಲೇಖ-4ರ ಈ ಕಛೇರಿಯ ಆದೇಶದಲ್ಲಿ ಗೌರವಧನ ಪಾವತಿಗೆ ಅನುದಾನ ಬಿಡುಗಡೆ ಮಾಡಿದ್ದು, ಆದರೆ ಮೇಲಿನ ಕಂಡಿಕೆಯಲ್ಲಿ ತಿಳಿಸಿರುವ ಸ್ಥಳಾಂತರಗೊಂಡಿರುವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಅತಿಥಿ ಉಪನ್ಯಾಸಕರ ಗೌರವಧನ ಪಾವತಿಗೆ ಅನಾನುಕೂಲವಾಗುವುದರಿಂದ ಗೌರವಧನವನ್ನು ಆಯಾ ಕಾಲೇಜುಗಳ ವ್ಯಾಪ್ತಿಯಡಿಯಲ್ಲಿ ಬರುವ ಇತರೆ ಕಾಲೇಜುಗಳ ಮುಖಾಂತರ ಖಜಾನೆಗಳಿಗೆ ಕೆ-2 ಮೂಲಕ ಬಿಲ್ಲನ್ನು ಸಿದ್ದಪಡಿಸಿ ಡ್ರಾ ಮಾಡುವ ವ್ಯವಸ್ಥೆ ಕಲ್ಪಿಸಬೇಕಾಗಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

| ಸ್ಥಳಾಂತರಗೊಂಡಿರುವ ಕಾಲೇಜುಗಳ ವಿವರ | ಅತಿಥಿ ಉಪನ್ಯಾಸಕರ ಗೌರವಧನದ ಮೊತ್ತ. | ಒಂದೇ ಖಜಾನೆ ವ್ಯಾಪ್ತಿಯಡಿಯಲ್ಲಿ ಬರುವ ಕಾಲೇಜಿಗೆ ಅನುದಾನ ಅಪ್ಲೋಡ್ ಮಾಡಿರುವ ವಿವರ. | ಡಿಡಿಒ ಕೋಡ್ |
|---|---|---|---|
| 1 | 2 | 3 | 4 |
| ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುರುವನೂರು. | 200005 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ. | 182390 |
| ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿ ಮೈಸೂರು, ಹೊಳೆನರಸೀಪುರ. | 226782 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ. | 182180 |
| ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೆರಕಣಾಂಬಿ. | 228380 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಂಡ್ಲುಪೇಟೆ. | 181870 |
| ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರೆಹಳ್ಳಿ. | 34698 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೇಲೂರು. | 182110 |

ಮೇಲೆ ತಿಳಿಸಿರುವಂತೆ ಕಾಲಂ(3) ರಲ್ಲಿರುವ ಕಾಲೇಜುಗಳ ಪ್ರಾಂಶುಪಾಲರುಗಳು ಕಾಲಂ(1)ರಲ್ಲಿರುವ ಕಾಲೇಜುಗಳ ಅತಿಥಿ ಉಪನ್ಯಾಸಕರುಗಳ ಗೌರವಧನ ಪಾವತಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ/ದಾಖಲೆಗಳನ್ನು ಪಡೆದು ಖಜಾನೆ-2ರಡಿಯಲ್ಲಿ ಬಿಲ್ಲುಗಳನ್ನು ಸಿದ್ದಪಡಿಸಿ ಖಜಾನೆಗೆ ಸಲ್ಲಿಸುವ ಮುಖಾಂತರ ಗೌರವಧನ ಪಾವತಿಗೆ ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ.

ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಯನ್ನು:

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ ಮತ್ತು ಕಲಬುರ್ಗಿ.
2. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು – ಮಾಹಿತಿ ಹಾಗೂ ಸಂಬಂಧಪಟ್ಟ ಖಜಾನೆ/ಉಪಖಜಾನೆಗೆ ನಿರ್ದೇಶನ ನೀಡಲು ಕೋರಿದೆ.

C:\Users\Admin\Desktop\ಅತಿಥಿ2019-20.docx